ರೇಶ್ಮಾ ಭಟ್

ಕಲೆ: ರೂಪಶ್ರೀ ಕಲ್ಲಿಗನೂರ್

# ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ



ನಾವು ಪ್ರಾಥಮಿಕ ಶಾಲೆಗೆ ಹೋಗುವಾಗ ನಮ್ಮ ತರಗತಿಯ ತರಲೆ ತಿಂಮ ಒಂಬತ್ತು ಎಂಬ ಸಂಖ್ಯೆಯನ್ನು ಬರೆದು ಅದನ್ನು ತುಸು ಬಾಗಿಸಿ, ಬೆಕ್ಕಿನ ಚಿತ್ರವನ್ನಾಗಿಸುವುದನ್ನು ನಮಗೆ ಕಲಿಸಿದ್ದ. ಮೊದಮೊದಲು ಇದನ್ನು ಎಲ್ಲೆಂದರಲ್ಲಿ ಬಿಡಿಸಿ ನಾವು ನಮ್ಮ ಕಲಾಪ್ರೌಢಿಮೆಯನ್ನು ಮೆರೆದಿದ್ದೆವು. ಮತ್ತೆ ನಮ್ಮ ನೋಟುಬುಕ್ಕು ಪೂರ್ತಿ ಬೆಕ್ಕುಗಳ ಹಿಂಡನ್ನು ತುಂಬಿಸಿದ್ದೆವು. ಮನೆಗೆ ಬಂದು ತಂಗಿಯರ ತಮ್ಮಂದಿರ ಎದುರು ನಮ್ಮ ಬೆರಳಿನ ಕರಾಮತ್ತು ತೋರಿಸಿ ಅವು, 'ಅಯ್ ಕೊತ್ತೀ...' ಎಂದು ಕಣ್ಣರಳಿಸಿ ಬಾಯಿಮುಚ್ಚದೆ ನೋಡುವುದನ್ನು ಕಂಡು ಎಲ್ಲರೆದುರು ಹೀರೊಗಳಾಗಿದ್ದೆವು. ಮನೆಯ ಗೋಡೆಯ ಮೇಲೆ, ಡಾಮರು ರೋಡಿನ ಮೇಲೆ, ಕ್ಲಾಸ್ ರೂಂ ಬೋರ್ಡಿನ ಮೇಲೆ, ಪೇಪರ್ ಕಾರ್ಡಿನ ಮೇಲೆ... ಮೊದಲು ಒಂಬತ್ತು ಕಾಣಿಸಿಕೊಂಡು ತದನಂತರ ನಾನಾ ವಿಧದ ಬೆಕ್ಕಪ್ಪಗಳು ಕಾಣಿಸಿಕೊಂಡವು. ಬೆಕ್ಕಿನ ಚಿತ್ರ ಬಿಡಿಸುವಾಗ ಏನನ್ನು ಮರೆತರೂ ಮೀಸೆ ಬಿಡಿಸುವುದನ್ನು ಮಾತ್ರ ಮರೆಯಲೇಬಾರದು ಎಂಬ ತಿಂಮನ ಸಲಹೆಯನ್ನು ತಪ್ಪದೆ ಪಾಲಿಸುತ್ತಿದ್ದೆವು. ಎಷ್ಟೆಂದರೆ ಕೆಲವೊಮ್ಮೆ ಈ ಮಾರ್ಜಾಲಗಳ